ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1091 (1939) |
| ಸದಸ್ಯರ ಹೆಸರು | ಶ್ರೀ ಪಿ ಹೆಚ್ ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ |
| ಉತ್ತರಿಸಬೇಕಾದ ದಿನಾಂಕ | 23.03.2026 |
| ಉತ್ತರಿಸುವವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ಮೃಗಾಲಯಗಳ ಸಂಖ್ಯೆ ಎಷ್ಟು | ರಾಜ್ಯದಲ್ಲಿ 09 ಮೃಗಾಲಯಗಳಿರುತ್ತವೆ. |
| ಆ) | ರಾಜ್ಯದಲ್ಲಿನ ಮೃಗಾಲಯಗಳಲ್ಲಿನ ಪಶು ವೈದ್ಯರ ಸಂಖ್ಯೆ ಎಷ್ಟು, ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು (ಮೃಗಾಲಯವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿನ ಮೃಗಾಲಯಗಳಲ್ಲಿನ ಪಶು ವೈದ್ಯರ ವಿವರ ಈ ಕೆಳಕಂಡಂತಿರುತ್ತವೆ. |

| ಕ್ರ ಸಂ | ಮೃಗಾಲಯದ ಹೆಸರು | ಪಶುವೈದ್ಯರು | | | ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಪಶುವೈದ್ಯಕೀಯ ಇಲಾಖೆ | | |
|---|---|---|---|---|---|---|---|
| | | ಮಂಜೂರಾದ ಹುದ್ದೆ | ಭರ್ತಿಯಾದ ಹುದ್ದೆ | ಖಾಲಿ ಹುದ್ದೆ | ಮಂಜೂರಾದ ಹುದ್ದೆ | ಭರ್ತಿಯಾದ ಹುದ್ದೆ | ಖಾಲಿ ಹುದ್ದೆ |
| 1 | ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು | 02 | | 02 | 01 | 01 | |
| 2 | ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು | 01 | 01 | - | 02 | | 02 |
| 3 | ಹುಲಿ ಮತ್ತು ಸಿಂಹಧಾಮ, ತ್ಯಾವರೆಕೊಪ್ಪ, ಶಿವಮೊಗ್ಗ | 01 | - | 01 | - | | |
| 4 | ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಹೊಸಪೇಟೆ, ಬಳ್ಳಾರಿ | 01 | - | 01 | - | - | - |
| 5 | ಕಿತ್ತೂರು ರಾಣಿ ಚೆನ್ನಮ್ಮ ನಿಸರ್ಗಧಾಮ ಮೃಗಾಲಯ [illegible], ಬೆಳಗಾವಿ | 01 | - | 01 | - | - | - |
| 6 | ಮಕ್ಕಳ ಉದ್ಯಾನವನ ಹಾಗೂ ಕಿರು ಮೃಗಾಲಯ, ಕಲ್ಬುರ್ಗಿ | 01 | - | 01 | - | - | - |
| 7 | ಆಡುಮಲ್ಲೇಶ್ವರ ಮಕ್ಕಳ ಉದ್ಯಾನವನ | 01 | - | 01 | - | - | - |

| ಕ್ರ.ಸಂ | ಪ್ರಶ್ನೆ | ಉತ್ತರ | | | | | |
|---|---|---|---|---|---|---|---|
| | ಹಾಗೂ ಕಿರು ಮೃಗಾಲಯ, ಚಿತ್ರದುರ್ಗ | | | | | | - |
| 8 | ಇಂದಿರಾ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ, ದಾವಣಗೆರೆ | 01 | - | 01 | - | - | |
| 9 | ಮಕ್ಕಳ ಉದ್ಯಾನವನ ಹಾಗೂ ಕಿರು ಮೃಗಾಲಯ, ಬಿಂಕದಕಟ್ಟೆ, ಗದಗ | 01 | - | 01 | - | - | - |
| | **ಒಟ್ಟು** | **10** | **01** | **09** | **03** | **01** | **02** |

**ಟಿಪ್ಪಣಿ:** ಸರ್ಕಾರದ ಅನುಮೋದಿತ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಪಶುವೈದ್ಯಾಧಿಕಾರಿಗಳ ಒಟ್ಟು 10 ಹುದ್ದೆಯು ಮಂಜೂರಾಗಿದ್ದು, ಪ್ರಾಣಿಗಳ ಆರೋಗ್ಯ ನಿರ್ವಹಣೆಯ ಹಿತದೃಷ್ಟಿಯಿಂದ ಖಾಲಿ ಇರುವ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಲು ಪಶುವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗಿರುತ್ತದೆ ಹಾಗೂ ಪಶುವೈದ್ಯಕೀಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಶುವೈದ್ಯಾಧಿಕಾರಿಯವರು ಹೆಚ್ಚುವರಿ ಪ್ರಭಾರದಲ್ಲಿ ಕಲ್ಬುರ್ಗಿ ಮೃಗಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಎಲ್ಲಾ ಮೃಗಾಲಯಗಳಲ್ಲಿ ಪ್ರಾಣಿಗಳ ಆರೋಗ್ಯ ನಿರ್ವಹಣೆಯ ಹಿತದೃಷ್ಟಿಯಿಂದ ಖಾಲಿ ಇರುವ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಲು ಗುತ್ತಿಗೆ ಆಧಾರದಲ್ಲಿ ಪಶುವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ. ಅಲ್ಲದೆ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಎಲ್ಲಾ ಮೃಗಾಲಯಗಳಲ್ಲಿರುವ ಪ್ರಾಣಿಗಳ ಆರೋಗ್ಯ ನಿರ್ವಹಣೆಗೆ ಅನುಕೂಲವಾಗುವಂತೆ ಒಬ್ಬರು ಅನುಭವಿ/ನುರಿತ ಪಶುವೈದ್ಯ ಸಲಹೆಗಾರರು ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | ಮೃಗಾಲಯಗಳಲ್ಲಿ ಪಶು ವೈದ್ಯರ ಕೊರತೆಯಿಂದ ಪ್ರಾಣಿಗಳಿಗೆ ತುರ್ತು ಸಂದರ್ಭಗಳಲ್ಲಿ ಸೂಕ್ತ ಚಿಕಿತ್ಸೆ ಸಿಗದೇ ಪ್ರಾಣಿಗಳು ಮರಣ ಹೊಂದುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೃಗಾಲಯಗಳಲ್ಲಿ ಪಶುವೈದ್ಯರ ಕೊರತೆಯಿಂದ ಪ್ರಾಣಿಗಳು ಮೃತಪಟ್ಟಿರುವ ಪ್ರಕರಣವು ಸಂಭವಿಸಿರುವುದಿಲ್ಲ. ಮೃಗಾಲಯಗಳಲ್ಲಿ ಪ್ರಾಣಿಗಳ ಆರೋಗ್ಯ ನಿರ್ವಹಣೆಯ ಹಿತದೃಷ್ಟಿಯಿಂದ ಖಾಲಿ ಇರುವ ಹುದ್ದೆಗಳಲ್ಲಿ, ಕರ್ತವ್ಯ ನಿರ್ವಹಿಸಲು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗಿರುತ್ತದೆ. ಅಲ್ಲದೆ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಎಲ್ಲಾ ಮೃಗಾಲಯಗಳಲ್ಲಿರುವ ಪ್ರಾಣಿಗಳ ಆರೋಗ್ಯ ನಿರ್ವಹಣೆಗೆ ಅನುಕೂಲವಾಗುವಂತೆ ಒಬ್ಬರು ಅನುಭವಿ/ನುರಿತ ಪಶುವೈದ್ಯ ಸಲಹೆಗಾರರು ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. |
| (ಈ) | ಬಂದಿದ್ದರೆ, ಸರ್ಕಾರವು ಮೃಗಾಲಯಗಳಿಗಾಗಿ ಪಶು ವೈದ್ಯರ ನೇಮಕಾತಿ ಮಾಡಲು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಕರ್ನಾಟಕ ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ ಮೃಗಾಲಯಗಳಿಗೆ ಪಶುಸಂಗೋಪನೆ ಇಲಾಖೆಯಿಂದ ಪಶುವೈದ್ಯಾಧಿಕಾರಿಗಳನ್ನು ನಿಯೋಜನೆಯ ಮೂಲಕ ಭರ್ತಿ ಮಾಡಲಾಗುತ್ತಿದೆ. ಮೈಸೂರು ಮೃಗಾಲಯದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಪಶುವೈದ್ಯಾಧಿಕಾರಿಗಳನ್ನು ನಿಯೋಜಿಸುವಂತೆ ಕೋರಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |

ಸಂಖ್ಯೆ: ಅಪಜೀ 36 ಎಫ್‌ಪಿಸಿ 2025

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು